**ಓಎಸ್ ನಂಃ 23/2022**
**ಪಿ.ಡಬ್ಲ್ಯೂಃ1, ಶರಣಮ್ಮ**

ದಿನಾಂಕ **:24-11-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ . ಸಿ.ಬಿ.ಎ. ವಕೀಲರಿಂದ:

ನಮ್ಮ ಕುಟುಂಬಕ್ಕೆ ಅಂದರೆ ನಮ್ಮ ತಂದೆಗೆ 40 ಎಕರೆ ಜಮೀನು ಇತ್ತು. ನಮ್ಮ ಮುತ್ಯಾನಿಂದ ನಮ್ಮ ತಂದಗೆ 40 ಎಕರೆ ಜಮೀನು ಬಂದಿತ್ತು. ನಾನು ನಮ್ಮ ಮುತ್ಯಾನಿಂದ ನಮ್ಮ ತಂದಗೆ 40 ಎಕರೆ ಜಮೀನು ಬಂದ ಬಗ್ಗೆ ಹಾಗೂ ನಮ್ಮ ಮುತ್ಯಾನಿಗೆ 40 ಎಕರೆ ಜಮೀನು ಇದ್ದ ಬಗ್ಗೆ ನಮ್ಮ ತಂದೆ ಹೆಸರಿನ ದಾಖಲೆ ಹಾಕಿರುತ್ತೇನೆ ಎಂದು ಹೇಳುತ್ತಾರೆ. ಸದರಿ ನಮ್ಮ ನಮ್ಮ ಮುತ್ಯಾನಿಗೆ ಯಾವ ಸರ್ವೆ ನಂಬರಲ್ಲಿ ಎಷ್ಟು ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಕಿದ್ದೀರಾ ಎಂದ್ರೆ ಸಾಕ್ಷಿ ನಮ್ಮ ಮುತ್ಯಾನ ಹೆಸರಿಗೆ ಇಲ್ಲಾ ನಮ್ಮ ತಂದೆ ಹೆಸರಿಗೆ ಇದ್ದ ದಾಖಲೆ ಹಾಕಿದ್ದೇನೆ ಎಂದು ಹೇಳುತ್ತಾರೆ. ನಮ್ಮ ಮುತ್ಯಾನಿಂದ ನಮ್ಮ ತಂದೆಗೆ 5-6 ಎಕರೆ ಜಮೀನು ಮಾತ್ರ ಬಂದಿತ್ತು ಎಂದರೆ ಸಾಕ್ಷಿ ಇಲ್ಲಾ 7 ಎಕರೆ ಜಮೀನು ಬಂದಿತ್ತು ಎಂದು ಹೇಳುತ್ತಾರೆ.

ನನ್ನ ಅಣ್ಣ ದೇವಿಂದ್ರಪ್ಪ ಇದ್ದಾಗಲೇ ನಮ್ಮ ತಂದೆ ಹಾಗೂ ನಮ್ಮ ಅಣ್ಣ ಸೇರ ನನ್ನ ಹಾಗೂ ಮಲ್ಲಮ್ಮ ಇವರ ಮದುವೆಯನ್ನು ಮಾಡಿದ್ದರು ಎಂದರೆ ಸಾಕ್ಷಿ ಇಲ್ಲಾ ನಮ್ಮ ಅಣ್ಣ ತೀರಿಕೊಂಡ ನಂತರ ನನ್ನ ಮದುವೆ ಆಗಿದೆ ಎಂದು ಹೇಳುತ್ತಾರೆ. ನನ್ನ ಅಣ್ಣ ಯಾವ ವರ್ಷ ತೀರಿಕೊಂಡ ಮ್ತತ್ತು ನನ್ನ ಮದುವೆ ಯಾವ ವರ್ಷದಲ್ಲಿ ಆಗಿತ್ತು ಎಂದರೆ ಸಾಕ್ಷಿ ಅದು ನನಗೆ ಹೇಳಲು ಆಗುವುದಿಲ್ಲಾ ಎಂದು ಹೇಳುತ್ತಾರೆ. ನನ್ನ ಅಣ್ಣ ಮತ್ತು ನನ್ನ ತಂದೆ ಜೀವಂತ ಇದ್ದಾಗ ಅವರ ದುಡಿಮೆಯಿಂದ ನಮ್ಮ ಮದುವೆ ಮಾಡಿ ವರದಕ್ಷಿಣೆ ಎಲ್ಲಾ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮ್ಮ ಅಣ್ಣ ಮಾಡಿಲ್ಲಾ ಎಂದು ಹೇಳುತ್ತಾರೆ. ನನ್ನ ಅಣ್ಣ ತನ್ನ ಸ್ವಂತ ದುಡಿಮೆ ಇಂದ ದಿಗ್ಗಾಂವ ಸೀಮೆಯ ಸ.ನ. 594 ಮತ್ತು ಸ.ನ. 591 ಜಮೀನು ಖರಿದಿ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲಾ ನಮ್ಮ ತಂದೆ ತಾಯಿ ಖರಿದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನನ್ನ ಅಣ್ಣ ನಮ್ಮ ಎಲ್ಲರಿಗೋಸ್ಕರ ದುಡಿದು ದುಡಿದು ಆರೋಗ್ಯ ಹೆದಗಟ್ಟಿತ್ತು ಎಂದರೆ ಸಾಕ್ಷಿ ನಾವು ಸಣ್ಣವರಿದ್ದೇವು ನಮಗೆ ಗೊತ್ತಿಲ್ಲಾ ಎಂದು ಹೇಳುತ್ತಾರೆ. ನನ್ನ ಹಾಗೂ ಮಲ್ಲಮನ ಮದುವೆ ಆಗಿ ಹೋಗಿತ್ತು ಹಾಗಾಗಿ 1 ನೇ ಪ್ರತಿವಾದಿಯೇ ನನ್ನ ಅಣ್ಣ ಯೋಗಕ್ಷೇಮ ನೋಡಿಕೊಂಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ 1 ನೇ ಪ್ರತಿವಾದಿ ನನ್ನ ಅಣ್ಣನನ್ನು ನೋಡಿಕೊಂಡಿದ್ದರಿಂದ ತಾನು ದುಡಿದ ಸ್ವತ್ತು ಮನೆಯವರಿಗೆ ಇರಲಿ ಎಂದು 1 ನೇ ಪ್ರತಿವಾದಿ ಹೆಸರಿಗೆ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ 1 ನೇ ಪ್ರತಿವಾದಿಯನ್ನು

ಓಎಸ್ ನಂಃ **23/2022**
ಪಿ.ಡಬ್ಲ್ಯೂಃ**1,** ಶರಣಮ್ಮ

ನನ್ನ ಗಂಡನಿಗೆ ಮದುವೆ ಮಾಡಿಕೊಟ್ಟಿದು ಆ ಸಮಯದಲ್ಇ ನಾನು ಆಸ್ತಿಯಲ್ಲಿ ಯಾವುದೇ ಹಿಸ್ಸೆ ಕೇಳಬಾರದೆಂದು ಷರತ್ತು ಹಾಕಿ ಮದುವೆ ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಮದುವೆ ನನ್ನ ಗಂಡನ ಜೊತೆ ಆಗಿದೆ ಆದರೆ ಜಬರದಸ್ತಿಯಿಂದ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿಯು ನನ್ನ ಗಂಡನ ಜೊತೆ ಮದುವೆ ಆದ ನಂತರ ಅವರ ಜೊತೆ ಇದ್ದು ಅಣ್ಣನ ಆಸ್ತಿ ನೋಡಿಕೊಂಡು ಸ್ವತಃ ತಾನು ಸಹ ಆಸ್ತಿ ಗಳಿಸಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ನಾನು ವಾಸ ಮಾಡುವ ಮನೆ ಹಾಗೂ 1 ನೇ ಪ್ರತಿವಾದಿ ಮನೆ ನಡುವೆ 50 ರಿಂದ 60 ಮೆನೆಗಳು ಇವೆ ಎಂದರೆ ಸಾಕ್ಷಿ ಹೌದು ದೂರ ದೂರ ಇದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ತನ್ನ ದುಡಿಯಮೆಯಿಂದ ಟ್ರಾಕ್ಟರ ಖರಿದಿ ಮಾಡಿದ್ದಾರೆ ಎಂದರೆ ಸಾಕ್ಷಿ ನಾವು ದುಡಿದ್ದೇವೆ ಎಂದು ಹೇಳುತ್ತಾರೆ. ಅವರು ಮನೆ ಕಟ್ಟಿದ್ದಾರೆ ಎಂದರೆ ಹೌದು ನಾವೇ ಎಲ್ಲಾ ಕಟ್ಟಿದ್ದೇವೆ ಎಂದು ಹೇಳುತ್ತಾರೆ. ನಾನು ಸಹ ಮನೆ ಕಟ್ಟಿಸುತ್ತಿದ್ದು ಈಗ ಲೆಂಟಲ್ ಲೆವಲ್ ಗೆ ಇದೆ ಎಂದರೆ ಸಾಕ್ಷಿ ಇಲ್ಲಾ ಎಂಧು ಹೇಳುತ್ತಾರೆ. ನಾವು ನನ್ನ ಮಕ್ಕಳು ಅವರ ಮನೆಗೆ ಹೋಗಿ ಹೊಲ ಮತ್ತು ಟ್ರಾಕ್ಟರ ನಮ್ಮ ಹೆಸರಿಗೆ ಮಾಡುವಂತೆ ಜಗಳ ಮಾಡಿದ್ದೇವೆ ಎಂದೆರ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯು ಬಂದು ನನಗೆ ನಿನಗೆ ಗಂಡನ ಮನಗೆ ಕೊಟ್ಟಿದ್ದಾರೆ ಅವಳಿಗೂ ತೊಂದರೆ ಮಾಡಬೇಡಾ ಎಂದು ಬುದ್ದಿ ಹೇಳಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ.
ಮುಂದುವರೆದ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.